REGISTERED WITH RNI NEW DELHI REG. N0.69683/97-Postal Registration No.RNP/KA/BGS/2259/2024-2026
Office of Posting: Bangalore PSO, Bangalore - 560026.; Date of Posting & Publishing Every Wednesday; Price Rs. 2 (Pages-8)

ಪಟ್ಟಣ ಸಹಕಾರ ಬ್ಯಾಂಕುಗಳ

# ವಾರ್ತಾ ಪತ್ರಿಕೆ

ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಅಧಿಕೃತ ಕನ್ನಡ ವಾರಪತ್ರಿಕೆ

ಸಂಪುಟ : 32 । ಸಂಚಿಕೆ : 43 । 28 ಜನವರಿ 2026 । ಬುಧವಾರ । ಪುಟಗಳು : 8 । ಬೆಲೆ : 2/-

**ಶ್ರೀ ತ್ಯಾಗರಾಜ ಕೋ-ಆಪರೇಟಿವ್ ಬ್ಯಾಂಕಿನ ವತಿಯಿಂದ ಶ್ರೀ ತ್ಯಾಗರಾಜರ ಆರಾಧನಾ ಮಹೋತ್ಸವ**

## ಸಹಕಾರ ಬ್ಯಾಂಕುಗಳು ಉದ್ಯೋಗ ಸೃಷ್ಟಿಸುವಂತ ಸಾಲಗಳಿಗೆ ಆದ್ಯತೆ ನೀಡಬೇಕು: ಸಚಿವ ಶ್ರೀ ಎಚ್.ಕೆ ಪಾಟೀಲ್



**ಬೆಂಗಳೂರು:** ಶ್ರೀ ತ್ಯಾಗರಾಜ ಕೋ-ಆಪರೇಟಿವ್ ಬ್ಯಾಂಕಿನ ವತಿಯಿಂದ ಏರ್ಪಡಿಸಲಾಗಿದ್ದ ಶ್ರೀ ತ್ಯಾಗರಾಜರ ಆರಾಧನಾ ಮಹೋತ್ಸವ ಕಾರ್ಯಕ್ರಮವನ್ನು ಉದ್ಘಾಟನೆ ಮಾಡಿ ಮಾತನಾಡಿದ, ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಪ್ರವಾಸೋದ್ಯಮ ಸಚಿವರಾದ ಶ್ರೀ ಎಚ್.ಕೆ. ಪಾಟೀಲ್ ಅವರು, ಸಹಕಾರ ಬ್ಯಾಂಕುಗಳು ಉದ್ಯೋಗ ಸೃಷ್ಟಿಸುವಂತ ಸಾಲಗಳಿಗೆ ಆದ್ಯತೆ ನೀಡಬೇಕು. ಈ ಮುಖೇನ ಸಹಕಾರ ವಲಯ ಉದ್ಯೋಗ ಸೃಷ್ಟಿಗೆ ಹೆಚ್ಚಿನ ಆದ್ಯತೆ ನೀಡಬೇಕೆಂದರು. ಈ ನಿಟ್ಟಿನಲ್ಲಿ ಶ್ರೀ ತ್ಯಾಗರಾಜ ಕೋ-ಆಪರೇಟಿವ್ ಬ್ಯಾಂಕ್ ಅನೇಕ ವಿಭಿನ್ನ ಯೋಜನೆಗಳೊಂದಿಗೆ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

'ದೇಶದಲ್ಲಿ 1451 ಪಟ್ಟಣ ಸಹಕಾರ ಬ್ಯಾಂಕುಗಳಿದ್ದು, ಇವುಗಳ ದುಡಿಯುವ ಬಂಡವಾಳದ ಪ್ರಮಾಣವೇ ರೂ. 6.50 ಲಕ್ಷ ಕೋಟಿಯಷ್ಟಿದೆ. ಇದರಲ್ಲಿ ಠೇವಣಿ ಪ್ರಮಾಣ ರೂ.5.33 ಲಕ್ಷ ಕೋಟಿ. ಕರ್ನಾಟಕದ 249 ಪಟ್ಟಣ ಸಹಕಾರ ಬ್ಯಾಂಕುಗಳಲ್ಲಿ 24 ಲಕ್ಷ ಸದಸ್ಯರಿದ್ದು, ದುಡಿಯುವ ಬಂಡವಾಳ ಪ್ರಮಾಣ ರೂ.58 ಸಾವಿರ ಕೋಟಿ. ಈ ಬ್ಯಾಂಕುಗಳು ಉತ್ತಮ ಸೇವೆ ನೀಡುವ ಮೂಲಕ ರೂ.500 ಕೋಟಿ ನಿವ್ವಳ ಲಾಭಪಡೆಯುತ್ತಿವೆ. ಈ ಬ್ಯಾಂಕುಗಳಲ್ಲಿ ಎನ್‌ಪಿಎ ಪ್ರಮಾಣ ಶೇ.3ಕ್ಕಿಂತ ಕಡಿಮೆ ಇರುವುದು ಗಮನಾರ್ಹ' ಎಂದರು.

ಮುಂದುವರಿದು ಮಾತನಾಡಿದ ಅವರು, 'ಸರ್ಕಾರದ ನೆರವು ಇಲ್ಲದೇ ಪಟ್ಟಣ ಸಹಕಾರ ಬ್ಯಾಂಕುಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. ತ್ಯಾಗರಾಜ ಬ್ಯಾಂಕಿನವರು ಉದ್ಯೋಗ ಸೃಷ್ಟಿ ಮಾಡುವವರಿಗೆ ಸಾಲ ನೀಡುವ ಪದ್ಧತಿಯನ್ನು ರೂಢಿಸಿಕೊಳ್ಳಬೇಕು. ಇದು ಮುಂದಿನ ದಿನಗಳಲ್ಲಿ ಬ್ಯಾಂಕಿನ ಪ್ರಗತಿಗೂ ಸಹಕಾರಿಯಾಗಲಿದೆ' ಎಂದು ಸಲಹೆ ನೀಡಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಮಾಜಿ ವಿಧಾನ ಪರಿಷತ್ ಸದಸ್ಯರಾದ ಶ್ರೀ ಅಶ್ವತ್ಥನಾರಾಯಣರವರು ಮಾತನಾಡುತ್ತಾ, ಸಹಕಾರ ಬ್ಯಾಂಕುಗಳು ಸಾಮಾನ್ಯವಾಗಿ ಮಧ್ಯಮ ಮತ್ತು ಕೆಳ ಮಧ್ಯಮ ವರ್ಗದವರಿಗೆ ಆಸರೆಯಾಗಿ ಕಾರ್ಯನಿರ್ವಹಿಸುತ್ತಿವೆ. ಬೆಂಗಳೂರಿನ ನಾಗರೀಕರಿಗೆ ಸಹಕಾರ ವಲಯದ ಹೌಸಿಂಗ್ ಸೊಸೈಟಿಗಳು ಅಭಿವೃದ್ಧಿಪಡಿಸಿದ ಲಕ್ಷಾಂತರ ಸೈಟುಗಳ ಮೇಲೆ ಸಹಕಾರ ಬ್ಯಾಂಕುಗಳು ಮನೆ ನಿರ್ಮಾಣಕ್ಕೆ ಮತ್ತು ಸೈಟುಗಳ ಖರೀದಿಗೆ ಸಾಲಗಳನ್ನು



ಆರ್ಥಿಕ ಬೆಳವಣಿಗೆ ದರ ಶೇ.6-8 ಮಟ್ಟದಲ್ಲಿ ಇರಲಿದೆ: ವೈಷ್ಣವ್ 2

ಸಹ್ಯಾದ್ರಿ ಮಹಿಳಾ ಪಟ್ಟಣ ಸಹಕಾರ ಬ್ಯಾಂಕಿನ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಅವಿರೋಧ ಆಯ್ಕೆ 4

ನಿಮ್ಮ ಪ್ರಶ್ನೆ ನಮ್ಮ ಉತ್ತರ 7

## ಸಂಪಾದಕೀಯ

### ಆತ್ಮೀಯ ಸಹಕಾರಿಗಳೇ...



# 2026ರ ಕೇಂದ್ರ ಬಜೆಟ್ : ಆರ್ಥಿಕ ಸ್ಥಿರತೆಯ ಸಾಧ್ಯತೆ ಹಾಗೂ ಜನರ ನಿರೀಕ್ಷೆಗಳು

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಫೆಬ್ರವರಿ 1ರಂದು ಬೆಳಗ್ಗೆ 11 ಗಂಟೆಗೆ ಬಜೆಟ್ ಮಂಡನೆ ಮಾಡಲಿರುವುದಾಗಿ ವರದಿಯಾಗಿದೆ. ಇದರೊಂದಿಗೆ ಅವರು ಸತತ 9ನೇ ಬಾರಿಗೆ ಕೇಂದ್ರ ಬಜೆಟ್ ಮಂಡಿಸಿದಂತಾಗಿ, ಅವರು ಪಿ. ಚಿದಂಬರಂ ಅವರ ದಾಖಲೆಯನ್ನು ಸರಿಗಟ್ಟಿದಂತಾಗಲಿದೆ. ಮುಂದಿನ ಬಾರಿಯೂ ಅವರೇ ಬಜೆಟ್ ಮಾಡಿದಲ್ಲಿ 10 ಬಾರಿ ಬಜೆಟ್ ಮಂಡಿಸಿದ ಮೊರಾರ್ಜಿ ದೇಸಾಯಿ ಅವರ ದಾಖಲೆಯನ್ನು ಸರಿಗಟ್ಟಲಿದ್ದಾರೆ.

ಇದಕ್ಕೂ ಮುನ್ನ ಜನವರಿ 29ರಂದು ಆರ್ಥಿಕ ಸಮೀಕ್ಷೆ ಮಂಡನೆಯಾಗುವ ನಿರೀಕ್ಷೆಯಿದೆ. ಮುಖ್ಯ ಆರ್ಥಿಕ ಸಲಹೆಗಾರರಾದ ವಿ. ಅನಂತ ನಾಗೇಶ್ವರನ್ ಅವರು ಸಿದ್ಧಪಡಿಸಿರುವ, ದೇಶದ ಆರ್ಥಿಕ ಸ್ಥಿತಿಗತಿಯ ಸಮಗ್ರ ಚಿತ್ರಣವನ್ನು ಇದರಲ್ಲಿ ನೀಡುವ ಸಾಧ್ಯತೆ ಇದೆ.

ಪ್ರಸ್ತುತ ದೇಶದ ಆರ್ಥಿಕ ಸ್ಥಿತಿ ಗಮನಿಸಿದರೆ, 2026ರ ಬಜೆಟ್ ಯಾವುದೇ ಬದಲಾವಣೆಗಳನ್ನು ಮಾಡದೆ, ಪ್ರಸ್ತುತ ಇರುವುದನ್ನು ಸ್ಥಿರವಾಗಿಸಿಕೊಳ್ಳುವ ಸಾಧ್ಯತೆ ಇದೆ. ಆದರೆ, ಜನಗಳು, ಉದ್ಯಮಿಗಳು, ಕೈಗಾರಿಕೋದ್ಯಮಿಗಳು ತಮ್ಮದೇ ಆದ ನಿರೀಕ್ಷೆಯಲಿದ್ದಾರೆ. ಅದು ಸಹಜ. ಈಗಾಗಲೆ ನೂತನ ಆದಾಯ ತೆರಿಗೆ ಕಾಯ್ದೆ ಜಾರಿಯಲ್ಲಿರುವುದರಿಂದ ತೆರಿಗೆ ಶ್ರೇಣಿಯಲ್ಲಿ ಯಾವುದೇ ಬದಲಾವಣೆ ಸಾಧ್ಯತೆಗಳಿಲ್ಲ ಎಂದು ಬಹುತೇಕ ಆರ್ಥಿಕ ತಜ್ಞರ ನುಡಿದಿದ್ದಾರೆ. ಇಂಧನ ವಲಯಕ್ಕೆ ಹಾಗೂ ರಕ್ಷಣಾ-ತಂತ್ರಜ್ಞಾನ ಕ್ಷೇತ್ರಕ್ಕೆ ಹೆಚ್ಚಿನ ಉತ್ತೇಜನ ನೀಡುವ ಸಾಧ್ಯತೆಯೂ ಇರುವಂತಿದೆ.

ಗ್ರಾಮೀಣ ಮಹಿಳೆಯರ ಸಬಲೀಕರಣಕ್ಕಾಗಿ ಮಹಿಳಾ ಸ್ವಸಹಾಯ ಸಂಘಗಳ ಮೂಲಕ ಉದ್ಯೋಗ ಸೃಷ್ಟಿಸಿರುವ ಡ್ರೋನ್ ಶಕ್ತಿಗೆ ಈ ಬಾರಿಯ ಬಜೆಟ್‌ನಲ್ಲಿ ಹೆಚ್ಚುವರಿ ಅನುದಾನ ನೀಡುವ ಸಾಧ್ಯತೆ ಇದೆ. ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಆರ್ಥಿಕ ಸಹಾಯ ನೀಡುವ ಸಲುವಾಗಿಯೇ ಇರುವ ಪಿಎಂ-ಕಿಸಾನ್ ಯೋಜನೆಯಿಂದ ರೈತರು ಪ್ರಯೋಜನ ಪಡೆಯುತ್ತಿದ್ದಾರೆ. ಆದರೆ, ಈಗ ಕೃಷಿ ಚಟುವಟಿಕೆಯ ಎಲ್ಲ ಖರ್ಚು-ವೆಚ್ಚಗಳು ತುಟ್ಟಿಯಾಗಿರುವುದರಿಂದ ದೊರೆಯುತ್ತಿರುವ ಆರು ಸಾವಿರ ರೂಪಾಯಿ ಸಾಲದಾಗಿದ್ದು ಅದನ್ನು ಎಂಟು ಸಾವಿರಕ್ಕೆ ಹೆಚ್ಚಿಸಬಹುದೆನ್ನುವ ನಿರೀಕ್ಷೆಯನ್ನು ರೈತಾಪಿ ವರ್ಗ ಇರಿಸಿಕೊಂಡಿದ್ದಾರೆ. ಅವರುಗಳ ನಿರೀಕ್ಷೆ ಈಡೇರಲಿ ಎಂದು ನಾನು ಕೂಡ ಬಯಸುತ್ತೇನೆ.

ಕೇಂದ್ರ ಬಜೆಟ್ ಮೇಲೆ ರಾಜ್ಯದ ಜನ ಅಪಾರ ನಿರೀಕ್ಷೆ ಇಟ್ಟುಕೊಂಡಿದ್ದಾರೆ. ರಾಜ್ಯದ ಮೂಲಸೌಕರ್ಯ, ಕೃಷಿ ಸಂಸ್ಕರಣ ಘಟಕ ಮತ್ತು ರೈಲ್ವೇ ಸಂಪರ್ಕಕ್ಕೆ ಆದ್ಯತೆ ನೀಡಿದೆ. ಉತ್ತರ ಕರ್ನಾಟಕದ ಜಿಲ್ಲೆಗಳು ನೀರಾವರಿ ಯೋಜನೆಗಳಿಗೆ ರಾಷ್ಟ್ರೀಯ ಮಾನ್ಯತೆ ಮತ್ತು ಹೊಸ ಉದ್ಯೋಗ ಸೃಷ್ಟಿಗೆ ಬೃಹತ್ ಕೈಗಾರಿಕೆಗಳನ್ನು ಎದುರು ನೋಡುತಿದೆ. ಮಂಡ್ಯ ಹಾಗೂ ಬೀದರ್ ಜಿಲ್ಲೆ ಜನಗಳಿಗೆ ಉದ್ಯೋಗ ಸೃಷ್ಟಿಸುವ ಸಲುವಾಗಿ ಕೈಗಾರಿಕೆ ಸ್ಥಾಪನೆ, ಕರಾವಳಿ ಮತ್ತು ಮಲೆನಾಡು ಭಾಗಗಳ ಪ್ರವಾಸೋದ್ಯಮ ಅಭಿವೃದ್ಧಿ ಪೂರಕ ಯೋಜನೆಗಳ ಬಗ್ಗೆ ನಿರೀಕ್ಷೆ ಇದೆ. ಒಟ್ಟಾರೆಯಾಗಿ ರಾಜ್ಯದ ಸಮಗ್ರ ಪ್ರಗತಿಗೆ ಈ ಬಾರಿಯ ಕೇಂದ್ರ ಬಜೆಟ್ ಪೂರಕವಾಗಲಿದೆ ಎಂಬುದು ಜನತೆಯಲ್ಲಿದೆ. ಎಲ್ಲರಂತೆ ನಾನೂ ಇರಿಸಿಕೊಂಡಿದ್ದೇನೆ. ಕಾದು ನೋಡುವ.

▸▸ ಎಚ್.ಕೆ. ಪಾಟೀಲ

## ಆರ್ಥಿಕ ಬೆಳವಣಿಗೆ ದರ ಶೇ.6-8 ಮಟ್ಟದಲ್ಲಿ ಇರಲಿದೆ: ವೈಷ್ಣವ್

**ದಾವೋಸ್** : ಮುಂದಿನ ಐದು ವರ್ಷಗಳವರೆಗೆ ಭಾರತದ ಆರ್ಥಿಕ ಬೆಳವಣಿಗೆ ದರವು ಶೇಕಡ 6-8ರ ಮಟ್ಟದಲ್ಲಿ ಇರಲಿದೆ ಎಂದು ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ಅವರು ಬುಧವಾರ ಹೇಳಿದ್ದಾರೆ.

ವಿಶ್ವ ಆರ್ಥಿಕ ವೇದಿಕೆಯ ವಾರ್ಷಿಕ ಸಮಾವೇಶದ ಕಾರ್ಯಕ್ರಮವೊಂದರಲ್ಲಿ ಮಾತಮಾಡಿದ ಅವರು, ಅನುಮತಿಗಳನ್ನು ನೀಡುವ ಪ್ರಕ್ರಿಯೆಯನ್ನು ಸರಳಗೊಳಿಸುವುದರ ಪ್ರಾಮುಖ್ಯವನ್ನು ವಿವರಿಸಿದ್ದಾರೆ. ಭಾರತದಲ್ಲಿ ಒಂದು ದೂರಸಂಪರ್ಕ ಟವರ್ ಅಳವಡಿಕೆಗೆ ಈ ಮೊದಲು ಸರಾಸರಿ 270 ದಿನಗಳು ಬೇಕಾಗುತ್ತಿದ್ದವು, ಅದು ಈಗ ಏಳು ದಿನಗಳಿಗೆ ಇಳಿಕೆಯಾಗಿದೆ ಎಂದು ತಿಳಿಸಿದ್ದಾರೆ.

ಉದ್ದೇಶ ಹಾಗೂ ಕ್ರಿಯೆಯ ನಡುವಿನ ಅಂತರವನ್ನು ತಗ್ಗಿಸಬೇಕು. ಅಧಿಕಾರಶಾಹಿ ವ್ಯವಸ್ಥೆಯು ರಾಜಕೀಯ ಶಕ್ತಿಯ ಜೊತೆ ಹೊಂದಿಕೊಳ್ಳುವಂತೆ ರಾಜಕೀಯ ನಾಯಕರು ಖಾತರಿಪಡಿಸಿಕೊಳ್ಳಬೇಕು ಎಂದು ಅವರು ಒತ್ತಿ ಹೇಳಿದ್ದಾರೆ. ಕಾರ್ಯಕ್ರಮದಲ್ಲಿ ಮಾತನಾಡಿದ ಭಾರತೀಯ ಕೈಗಾರಿಕಾ ಮಹಾಸಂಘದ (ಸಿಐಐ) ಅಧ್ಯಕ್ಷ ರಾಜೀವ್ ಮೆಮಾನಿ, 'ಭಾರತದಲ್ಲಿ ತಲಾವಾರು ಆದಾಯವು ಬಹಳ ಕಡಿಮೆ ಇದೆ. ಇದನ್ನು 2047ರ ವೇಳೆಗೆ ಐದು ಪಟ್ಟು ಹೆಚ್ಚಿಸಬೇಕು' ಎಂದು ಹೇಳಿದ್ದಾರೆ.

## ಫೋನ್‌ಪೇ ಐಪಿಒಗೆ ಸೆಬಿ ಒಪ್ಪಿಗೆ

**ನವದೆಹಲಿ** : ಫೋನ್‌ಪೇ ಕಂಪನಿಯ ಐಪಿಒಗೆ ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯು (ಸೆಬಿ) ಒಪ್ಪಿಗೆ ನೀಡಿದೆ. ಕಂಪನಿಯು ಶೀಘ್ರದಲ್ಲಿ ಪರಿಷ್ಕೃತ ದಾಖಲೆಗಳನ್ನು (ಯುಡಿಎಚ್‌ಆರ್‌ಪಿ) ಸೆಬಿಗೆ ಸಲ್ಲಿಸಲಿದೆ ಎಂದು ಮೂಲಗಳು ತಿಳಿಸಿವೆ.

ಈ ಐಪಿಒ ಮೂಲಕ ಹಾಲಿ ಷೇರುದಾರರು ತಮ್ಮ ಷೇರುಗಳನ್ನು ಮಾರಾಟ ಮಾಡಲಿದ್ದಾರೆ (ಆಫರ್ ಫಾರ್ ಸೇಲ್). ಕಂಪನಿಯು ಸಾರ್ವಜನಿಕರಿಗೆ ಷೇರು ಮಾರಾಟದ (ಐಪಿಒ) ಮೂಲಕ ಯಾವುದೇ ಹೆಚ್ಚುವರಿ ಪ್ರಾಥಮಿಕ ಬಂಡವಾಳ ಸಂಗ್ರಹಿಸುವುದಿಲ್ಲ ಎಂದು ತಿಳಿಸಿವೆ.

ಎನ್‌ಪಿಸಿಐ ಅಂಕಿ-ಅಂಶದ ಪ್ರಕಾರ ಒಟ್ಟು ಯುಪಿಐ ವಹಿವಾಟಿನಲ್ಲಿ ಫೋನ್‌ಪೇ ಪಾಲು ಶೇ 45ಕ್ಕಿಂತ ಹೆಚ್ಚಿದೆ. 2025ರ ಡಿಸೆಂಬರ್ ಅಂತ್ಯದ ವೇಳೆಗೆ 980 ಕೋಟಿ ವಹಿವಾಟುಗಳು ನಡೆದಿವೆ. 2024-25ರಲ್ಲಿ ಕಂಪನಿಯ ರೂ.7,115 ಕೋಟಿ ವರಮಾನ ಹೊಂದಿತ್ತು. ಇದು 2023-24ರ ವರಮಾನಕ್ಕೆ ಹೋಲಿಸಿದರೆ ಶೇ 40ರಷ್ಟು ಹೆಚ್ಚು.

ನೀಡುತ್ತಿರುವುದರಿಂದ ಅನುಕೂಲವಾಗುತ್ತಿದೆ. ಒಂದು ರೀತಿಯಲ್ಲಿ ಸಹಕಾರ ಕ್ಷೇತ್ರ ಬಡವರ ಆಪದ್ಭಾದವನಂತೆ ಕಾರ್ಯನಿರ್ವಹಿಸುತ್ತಿದೆ ಎಂದು ಶ್ಲಾಘಿಸಿದರು.

ಶ್ರೀ ತ್ಯಾಗರಾಜ ಕೋ–ಆಪರೇಟಿವ್ ಬ್ಯಾಂಕಿನ ಅಧ್ಯಕ್ಷರಾದ ಡಾ. ಎಂ.ಆರ್ ವೆಂಕಟೇಶ್‌ರವರು ಪ್ರಾಸ್ತಾವಿಕವಾಗಿ ಮಾತನಾಡುತ್ತಾ, ಶ್ರೀ ತ್ಯಾಗರಾಜ ಕೋ–ಆಪರೇಟಿವ್ ಬ್ಯಾಂಕ್ ಎಲ್ಲಾ ರೀತಿಯ ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಂಡು ರಾಷ್ಟ್ರೀಕೃತ ಬ್ಯಾಂಕುಗಳ ಸರಿಸಮನಾಗಿ ತನ್ನ ಸೇವೆಗಳನ್ನು ಗ್ರಾಹಕರಿಗೆ, ಸದಸ್ಯರಿಗೆ ನೀಡುತ್ತಿದೆ ಎಂದರು. ಮಹಿಳೆಯರಿಗೆ, ಸ್ವ–ಉದ್ಯೋಗ ಮಾಡುವವರಿಗೆ ವಿಶೇಷ ಯೋಜನೆಗಳನ್ನು ಬ್ಯಾಂಕು ಹೊಂದಿದೆ ಎಂದರು.





ಈ ಬಾರಿಯ "Best Urban Co-op Bank ಪ್ರಶಸ್ತಿ ಬೆಂಗಳೂರಿನ ವಿಜಯನಗರದಲ್ಲಿರುವ "ಜನತಾ ಸೇವಾ ಕೋ–ಆಪರೇಟಿವ್ ಬ್ಯಾಂಕಿಗೆ ಪ್ರಧಾನ ಮಾಡಲಾಯಿತು. ಈ ಪ್ರಶಸ್ತಿಯು ರೂ.25000, ನಗದು ಪುರಸ್ಕಾರ ಸ್ಮರಣಸಂಚಿಕೆ ಮತ್ತು ಪ್ರಶಂಸನಾ ಪತ್ರ ಒಳಗೊಂಡಿರುತ್ತದೆ. ಅದೇ ರೀತಿ 2025–26ರ ಅವಧಿಯ Best Employee of the Year ಪ್ರಶಸ್ತಿ ಶ್ರೀ ತ್ಯಾಗರಾಜ ಕೋ–ಆಪರೇಟಿವ್ ಬ್ಯಾಂಕಿನ ವ್ಯವಸ್ಥಾಪಕರಾದ ಶ್ರೀ ಕೆ.ಎನ್. ದೊಡ್ಡೇಗೌಡ ಹಾಗೂ ತುಮಕೂರಿನ ವೀರಶೈವ ಕೋ–ಆಪರೇಟಿವ್ ಬ್ಯಾಂಕಿನ ವ್ಯವಸ್ಥಾಪಕರಾದ ಶ್ರೀಮತಿ ಎಸ್. ಆಶಾರವರಿಗೆ ಪ್ರಧಾನ ಮಾಡಲಾಯಿತು.

ಶ್ರೀ ತ್ಯಾಗರಾಜ ಕೋ–ಆಪರೇಟಿವ್ ಬ್ಯಾಂಕ್ ತ್ಯಾಗರಾಜರ ಆರಾಧನಾ ಮಹೋತ್ಸವ ಅಂಗವಾಗಿ ಹೊರ ತಂದಿರುವ ಮೈಸ್ಟಾಂಪ್ ಮತ್ತು ವಿಶೇಷ ಪೋಸ್ಟಲ್ ಕವರ್ ಅನ್ನು ಎಚ್.ಕೆ .ಪಾಟೀಲ ಬಿಡುಗಡೆ ಮಾಡಿದರು.

ಅಶ್ವತ್ಥನಾರಾಯಣ, ವಿ. ತಾರಾ, ಗಜೇಂದ್ರಕುಮಾರ್ ಮೀನಾ, ಎಂ.ಆರ್. ವೆಂಕಟೇಶ್ ಉಪಸ್ಥಿತರಿದ್ದರು. ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ವ್ಯವಸ್ಥಾಪಕ ನಿರ್ದೇಶಕ ನವೀನ್, ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕ್‌ಗಳ ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಪುಂಡಲೀಕ ಎಸ್. ಕೇರೂರೆ, ತ್ಯಾಗರಾಜ ಬ್ಯಾಂಕ್ ಅಧ್ಯಕ್ಷ ಎಂ.ಆರ್. ವೆಂಕಟೇಶ್, ಉಪಾಧ್ಯಕ್ಷ ಎಂ.ಎನ್. ಕಂಬೇಗೌಡ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಎಸ್. ಶ್ರೀರಾಮ್, ಬ್ಯಾಂಕಿನ ನಿರ್ದೇಶಕರುಗಳು, ಸದಸ್ಯರು, ಅನೇಕ ಸಹಕಾರ ಬ್ಯಾಂಕುಗಳ ಅಧ್ಯಕ್ಷರು ಹಾಗೂ ನಿರ್ದೇಶಕರುಗಳು ಹಾಜರಿದ್ದರು.



## ಪಟ್ಟಣ ಸಹಕಾರ ಬ್ಯಾಂಕುಗಳ ಗಮನಕ್ಕೆ

ಮಹಾಮಂಡಳವು "ವಾರಪತ್ರಿಕೆ" ಹಾಗೂ "ತ್ರೈಮಾಸಿಕ ಬ್ಯಾಂಕಿಂಗ್ ಪ್ರಪಂಚ ಪತ್ರಿಕೆ" ಎಂಬ ಎರಡು ಪತ್ರಿಕೆಗಳನ್ನು ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಸಹಕಾರ ಕ್ಷೇತ್ರ, ಬ್ಯಾಂಕಿಂಗ್ ಕ್ಷೇತ್ರ ಹಾಗೂ ಇತರೆ ಉಪಯುಕ್ತ ಸುದ್ದಿ / ವಿಚಾರಗಳನ್ನು ಹಾಗೂ ಇತ್ತೀಚಿನ ದಿನಗಳಲ್ಲಿ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಬದಲಾವಣೆಗೊಳಪಡುವ ಸಹಕಾರಿ ಕಾನೂನು ವಿದ್ಯಮಾನಗಳ ಕುರಿತು ಪ್ರಶ್ನೋತ್ತರ, ವಿವಿಧ ಬ್ಯಾಂಕುಗಳ ಯಶೋಗಾಥೆ, ಪ್ರಗತಿ ಚಿತ್ರ, ಬ್ಯಾಂಕುಗಳಲ್ಲಿ ಜರುಗಿರುವ ವಿವಿಧ ಸಮಾರಂಭಗಳ ವಿವರಗಳನ್ನು ಪ್ರಕಟಿಸಲಾಗುತ್ತಿದೆ. ಪ್ರಯುಕ್ತ, ಬ್ಯಾಂಕಿಗೆ ಸಂಬಂಧಿಸಿದ ವರದಿಗಳನ್ನು ಕೂಡಲೇ ಮಹಾಮಂಡಳಕ್ಕೆ ಅಂಚೆ ಮೂಲಕ ಅಥವಾ ಇ–ಮೇಲ್ ವಿಳಾಸಕ್ಕೆ email: editorkubf1@gmail.com ಅಥವಾ kscubfed@gmail.comಗೆ ಕಳುಹಿಸಿಕೊಟ್ಟಲ್ಲಿ ಮಹಾಮಂಡಳದ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು.

## ಸಹ್ಯಾದ್ರಿ ಮಹಿಳಾ ಪಟ್ಟಣ ಸಹಕಾರ ಬ್ಯಾಂಕಿನ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಅವಿರೋಧ ಆಯ್ಕೆ

**ಶಿವಮೊಗ್ಗ :** ಸಹ್ಯಾದ್ರಿ ಮಹಿಳಾ ಪಟ್ಟಣ ಸಹಕಾರ ಬ್ಯಾಂಕ್ ನಿ., ದರ್ಗಾ ಕಾಂಪ್ಲೆಕ್ಸ್, ತಿಲಕ್ ನಗರ, ಶಿವಮೊಗ್ಗ ಇದರ 2026-2031ನೇ ಸಾಲಿನವರೆಗೆ ದಿನಾಂಕ: 14-01-2026ರಂದು ನಡೆದ ಪದಾಧಿಕಾರಿಗಳ ಚುನಾವಣೆಯಲ್ಲಿ ಶ್ರೀಮತಿ ವೀರಮ್ಮ ಪಿ. ರವರು ಬ್ಯಾಂಕಿನ ಅಧ್ಯಕ್ಷರಾಗಿ ಹಾಗೂ ಉಪಾಧ್ಯಕ್ಷರಾಗಿ ಶ್ರೀಮತಿ ಎಂ.ಕೆ.ಜ್ಯೋತಿ ರವರು ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ. ಈ ಸಂದರ್ಭದಲ್ಲಿ ಬ್ಯಾಂಕಿನ ಆಡಳಿತ ಮಂಡಳಿ ಸದಸ್ಯರು, ಸಿಬ್ಬಂದಿಗಳು, ಪಿಗ್ಮಿ ಸಂಗ್ರಹಕಾರರು ಶುಭ ಹಾರೈಸಿದರು.



## ಶ್ರೀ ಕಾಳಿದಾಸ ಸಹಕಾರ ಬ್ಯಾಂಕಿಗೆ ರಾಷ್ಟ್ರೀಯ ಶ್ರೇಷ್ಟತೆ ಪ್ರಶಸ್ತಿ

**ಬೆಂಗಳೂರು :** ಶ್ರೀ ಕಾಳಿದಾಸ ಸಹಕಾರ ಬ್ಯಾಂಕಿಗೆ ಸಹಕಾರ ವರ್ಗದಲ್ಲಿ ನೀಡಲಾಗುವ ರಾಷ್ಟ್ರೀಯ ಶ್ರೇಷ್ಠತೆ ಪ್ರಶಸ್ತಿ (ನ್ಯಾಷನಲ್ ಎಕ್ಸಲೆನ್ಸ್ ಅವಾರ್ಡ್) ಲಭಿಸಿರುವುದು ಅತ್ಯಂತ ಸಂತೋಷದ ವಿಷಯವಾಗಿದೆ.




ಈ ಪ್ರಶಸ್ತಿಯನ್ನು ದಿ.06.12.2025 ರಂದು ಬೆಂಗಳೂರಿನ ಮಣಿಪಾಲ್ ಅಕಾಡೆಮಿ ಆಫ್ ಹೈಯರ್ ಎಜುಕೇಷನ್ ಸಂಸ್ಥೆಯವರು ಗ್ಲೋಬಲ್ ಕೋ-ಆಪರೇಷನ್ ಡೆವಲಪ್‌ಮೆಂಟ್ ಸಮಿತ್ 2025 ಕಾರ್ಯಕ್ರಮದಲ್ಲಿ ಪ್ರಧಾನ ಮಾಡಿರುತ್ತಾರೆ. ಈ ಪ್ರಶಸ್ತಿಯನ್ನು ಬ್ಯಾಂಕಿನ ಪರವಾಗಿ ನಿರ್ದೇಶಕರಾದ ಶ್ರೀಮತಿ ಎಂ.ಹೆಚ್. ಪ್ರೇಮಲತ ಮತ್ತು ವೃತ್ತಿಪರ ನಿರ್ದೇಶಕರಾದ ಶ್ರೀ ಕೆ.ಎಸ್. ರಘು ಹಾಗೂ ಬ್ಯಾಂಕಿನ ಸಹಾಯಕ ಲೆಕ್ಕಿಗರಾದ ಶ್ರೀಮತಿ ಎನ್. ದೀಪರವರು ಸ್ವೀಕರಿಸಿರುತ್ತಾರೆ.

## ಸಂಡೂರು ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕಿನ ನೂತನ ಆಡಳಿತ ಮಂಡಳಿ



ಶ್ರೀ ಹೆಚ್. ರಾಧಾಕೃಷ್ಣ ಹಾಲಂಬಿ
ಅಧ್ಯಕ್ಷರು

**ಸಂಡೂರು:** ಸಂಡೂರು ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕಿನ ಅಧ್ಯಕ್ಷರಾಗಿ ಶ್ರೀ ಹೆಚ್. ರಾಧಾಕೃಷ್ಣ ಹಾಲಂಬಿ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸಂಡೂರು ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕಿನ ಆಡಳಿತ ಮಂಡಳಿ ನಿರ್ದೇಶಕರುಗಳಾಗಿ ಶ್ರೀ ಕೆ.ಎಸ್. ನಿಖಿಲ್, ಶ್ರೀ ಅನುಪ್ ಸಿ., ಶ್ರೀ ಕಾರ್ತಿಕ್ ಎಸ್. ಅಂಕಮನಾಳ್, ಶ್ರೀ ಎಂ. ಸಂತೋಷಕುಮಾರ್, ಶ್ರೀ ಬಿ. ನಾರಯಣಾಚಾರ್, ಶ್ರೀ ಕೆ. ಜೈ ಭಾಸ್ಕರ್, ಶ್ರೀ ಪಟ್ಟಣಶೆಟ್ಟಿ ಮಲ್ಲಿಕಾರ್ಜುನ, ಶ್ರೀಮತಿ ವನಜಾಕ್ಷಿ ಹೊಂಬಳ, ಶ್ರೀಮತಿ ಮಧುಮತಿ ಎಮ್. ಅಂಕಮನಾಳ್, ಶ್ರೀಮತಿ ಮಂಜುಳಾ ಜೆ.ಎಂ. ರವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆಂದು ಬ್ಯಾಂಕಿನ ಮುಖ್ಯಕಾರ್ಯನಿರ್ವಹಣಾಧಿಕಾರಿಗಳಾದ ಶ್ರೀ ಕೆ. ಪ್ರಕಾಶರವರು ತಿಳಿಸಿರುತ್ತಾರೆ.


## ವಿಜಯನಗರ ಜಿಲ್ಲೆ, ಹೊಸಪೇಟೆಯ ವಿಕಾಸ ಸೌಹಾರ್ದ ಕೋ-ಆಪರೇಟಿವ್ ಬ್ಯಾಂಕಿನ ಅಧ್ಯಕ್ಷರ ಅವಿರೋಧ ಆಯ್ಕೆ



**ಹೊಸಪೇಟೆ** : ವಿಕಾಸ ಸೌಹಾರ್ದ ಕೋ-ಆಪರೇಟಿವ್ ಬ್ಯಾಂಕ್ ಲಿ., ಹೊಸಪೇಟೆ ಜಿ. ವಿಜಯನಗರ ಇದರ ಆಡಳಿತ ಮಂಡಳಿಯ ನಿರ್ದೇಶಕರುಗಳ ಸ್ಥಾನಗಳಿಗೆ ದಿನಾಂಕ : 05.01.2026 ರಂದು ಮುಂದಿನ 05 ವರ್ಷಗಳ ಅವಧಿಗೆ ಅಭ್ಯರ್ಥಿಗಳಾದ ಶ್ರೀ ವಿಶ್ವನಾಥ ಚ. ಹಿರೇಮಠ, ಶ್ರೀ ಗಂಗಾಧರ ಪತ್ತಾರ, ಶ್ರೀ ಜಿ. ದೊಡ್ಡ ಬೋರಯ್ಯ ಶ್ರೀಮತಿ ಕೆ. ಉಷಾ, ಶ್ರೀ ಅನಂತ ಜೋಶಿ, ಶ್ರೀ ವಿಕಾಸ ಕೆ., ಶ್ರೀ ಬೇಳೂರು ಸುದರ್ಶನ, ಶ್ರೀ ಶಿವಕುಮಾರ್ ಶೆಟಕಾರ್, ಶ್ರೀ ಜಗದೀಶ ಸಿ. ಹಿರೇಮಠ, ಶ್ರೀಮತಿ ನವ್ಯಶ್ರೀ ಹಿರೇಮಠ, ಶ್ರೀ ಸುನೀಲಕುಮಾರ ಹಿರೇಮಠ, ಶ್ರೀ ರಾಘವೇಂದ್ರ ಎಂ. ಇವರುಗಳು ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ.

ನಂತರ ಪದಾಧಿಕಾರಿಗಳ ಚುನಾವಣೆಯು ದಿನಾಂಕ: 17.01.2026 ರಂದು ಜರುಗಿದ್ದು, ಶ್ರೀ ವಿಶ್ವನಾಥ ಚ. ಹಿರೇಮಠ ಇವರು ಅಧ್ಯಕ್ಷರಾಗಿ ಅವಿರೋಧವಾಗಿ ಪುನರಾಯ್ಕೆಯಾಗಿರುತ್ತಾರೆ. ಚುನಾವಣಾ ಪ್ರಕ್ರಿಯೆಯನ್ನು ಸಹಕಾರ ಸಂಘಗಳ ಹಿರಿಯ ಅಧಿಕಾರಿ ಹಾಗೂ ರಿಟರ್ನಿಂಗ್ ಅಧಿಕಾರಿ ಶ್ರೀ ಟಿ. ಕೃಷ್ಣನಾಯ್ಕ ಇವರು ಜರುಗಿಸಿದರು. ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಪ್ರಸನ್ನ ಹಿರೇಮಠ, ವಿಭಾಗೀಯ ವ್ಯವಸ್ಥಾಪಕರಾದ ಶ್ರೀಮತಿ ಮಧುಶ್ರೀ ಜಿ.ಎಸ್. ಮತ್ತು ಕೇಂದ್ರ ಕಛೇರಿಯ ವ್ಯವಸ್ಥಾಪಕರುಗಳಾದ ಶ್ರೀಮತಿ ಅಶ್ವಿನಿ ದೇಸಾಯಿ ಮತ್ತು ಗವಿಸಿದ್ದಪ್ಪ ಕೆ. ಹಾಗೂ ಸಿಬ್ಬಂದಿಯವರು ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಬ್ಯಾಂಕಿನ ಸದಸ್ಯರು, ಹಿತೈಷಿಗಳು ಹಾಜರಿದ್ದು, ಶುಭ ಹಾರೈಸಿದರು.

## 'ಲಕ್ಷ' ಬದಲಿಗೆ 'ಲ್ಯಾಕ್' ಎಂದು ಬರೆದರೆ ನಿಮ್ಮ ಚೆಕ್ ರದ್ದಾಗುತ್ತದೆಯೇ?




**ನವದೆಹಲಿ** : ನಗದು ಹಿಂಪಡೆಯುವುದು, ಹಣವನ್ನು ಠೇವಣಿ ಮಾಡುವುದು ಅಥವಾ ಪಾವತಿ ಮಾಡುವುದು ಸೇರಿದಂತೆ ಇತರ ಹಣಕ್ಕೆ ಸಂಬಂಧಿಸಿದ ಕೆಲಸಗಳಿಗೆ ಸಾಮಾನ್ಯವಾಗಿ ಬ್ಯಾಂಕುಗಳು ನಮ್ಮ ದೈನಂದಿನ ಜೀವನದ ಅತ್ಯಗತ್ಯ ಭಾಗವಾಗಿವೆ. ನೀವು ಎಂದಾದರೂ ಚೆಕ್ ಒಂದನ್ನು ನೀಡಿದ್ದರೆ ಅಥವಾ ಸ್ವೀಕರಿಸಿದ್ದರೆ, ಮೊತ್ತವನ್ನು ಪದಗಳು ಮತ್ತು ಅಂಕಿಗಳಲ್ಲಿ ಬರೆಯಬೇಕು ಎಂದು ನಿಮಗೆ ತಿಳಿದಿರುತ್ತದೆ. ಆದ್ಯಾಗೂ, ದೊಡ್ಡ ಮೊತ್ತಗಳನ್ನು ಬರೆಯುವಾಗ ಕಾಗುಣಿತದಲ್ಲಿನ ವ್ಯತ್ಯಾಸವನ್ನು ನೀವು ಎಂದಾದರೂ ಗಮನಿಸಿದ್ದೀರಾ? ಕೆಲವರು 'ಲಕ್ಷ' ಎಂದು ಬರೆಯುತ್ತಾರೆ, ಆದರೆ ಇತರರು 'ಲ್ಯಾಕ್' ಅನ್ನು ಬಯಸುತ್ತಾರೆ. ಹಾಗಾದರೆ, ಯಾವುದು ಸರಿ? ಮತ್ತು ಹೆಚ್ಚು ಮುಖ್ಯವಾಗಿ, 'ತಪ್ಪು' ಕಾಗುಣಿತವನ್ನು ಬಳಸುವುದರಿಂದ ನಿಮ್ಮ ಚೆಕ್ ರದ್ದಾಗಬಹುದೇ? ಎಂಬುದನ್ನು ನೋಡೋಣ.

ನೀವು ನೀಡುವ ಚೆಕನಲ್ಲಿ ಮೊತ್ತವನ್ನು ಬರೆಯುವಾಗ, ಅಕ್ಷರಗಳಲ್ಲಿ ಬರೆಯುವಾಗ 'ಲಕ್ಷ' ಎಂದು ಬರೆಯುವ ಬದಲು 'ಲ್ಯಾಕ್' ಎಂದು, ಅದು ಚೆಕ್ ಅನ್ನು ರದ್ದುಗೊಳಿಸುವುದಿಲ್ಲ. ಆರ್‌ಬಿಐ ಮಾರ್ಗಸೂಚಿಗಳ ಪ್ರಕಾರ, ಅಕ್ಷರಗಳಲ್ಲಿ ಮತ್ತು ಅಂಕಗಳಲ್ಲಿ ಬರೆದ ಮೊತ್ತ ಹೊಂದಿಕೊಳ್ಳುತ್ತಿರುವುದು ಮುಖ್ಯ, ಮತ್ತು ಅಕ್ಷರಗಳು ಸ್ಪಷ್ಟವಾಗಿ ಮತ್ತು ಅನುಮಾನರಹಿತವಾಗಿ ತಿಳಿದುಬರುತ್ತಿರಬೇಕು. ಸ್ವಲ್ಪ ಸ್ಪೆಲಿಂಗ್ ತಪ್ಪುಗಳು (ಉದಾ : 'lakh' ಬದಲು 'lac') ಮೊತ್ತದ ಅರ್ಥವನ್ನು ಬದಲಾಯಿಸದಿದ್ದರೆ, ಬ್ಯಾಂಕ್ ಅದನ್ನು ಒಪ್ಪಿಕೊಳ್ಳುತ್ತದೆ ಮತ್ತು ಚೆಕ್ ರದ್ದಾಗುವುದಿಲ್ಲ.

ಆರ್‌ಬಿಐ ತನ್ನ ಅಧಿಕೃತ ಮಾರ್ಗಸೂಚಿಗಳಲ್ಲಿ (ಮಾಸ್ಟರ್ ಸರ್ಕ್ಯುಲರ್ ಆನ್ ಕಸ್ಟಮರ್ ಸರ್ವೀಸ್ ಇನ್ ಬ್ಯಾಂಕ್ಸ್), ಚೆಕ್ಕುಗಳನ್ನು ಯಾವುದೇ ಭಾಷೆಯಲ್ಲಿ ಬರೆಯಬಹುದು ಎಂದು ಹೇಳಿದೆ. ಆದರೆ, ಬರೆಯುವುದು OCR (ಆಪ್ಟಿಕಲ್ ಕ್ಯಾರೆಕ್ಟರ್ ರೆಕಗ್ನಿಷನ್) ತಂತ್ರಜ್ಞಾನಕ್ಕೆ ಸೂಕ್ತವಾಗಿ ಸ್ಪಷ್ಟವಾಗಿರಬೇಕು. ಕನ್ನಡದಲ್ಲಿ 'ಲಕ್ಷ' ಎಂದೇ ಸ್ಟ್ಯಾಂಡರ್ಡ್ ಬರೆಯುವುದು ಉತ್ತಮ, ಏಕೆಂದರೆ ಅದು ಅಧಿಕೃತವಾಗಿ ಗುರುತಿಸಲ್ಪಟ್ಟಿದೆ. ಆದರೂ, 'ಲ್ಯಾಕ್' ಬರೆದರೂ ಅರ್ಥ ಸ್ಪಷ್ಟವಾಗಿದ್ದರೆ ಸಮಸ್ಯೆ ಉಂಟಾಗುವುದಿಲ್ಲ. ಏಕೆಂದರೆ ಆರ್‌ಬಿಐ ಅಕ್ಷರಕ್ಕಿಂತ ಅರ್ಥಕ್ಕೆ ಒತ್ತು ನೀಡುತ್ತದೆ. ತಪ್ಪುಗಳನ್ನು ತಡೆಯಲು ಹೊಸ ಚೆಕ್ ಬಳಸಿ, ಅಥವಾ ನಿಮ್ಮ ಬ್ಯಾಂಕಿನೊಂದಿಗೆ ದೃಢೀಕರಿಸಿ. ಅಕ್ಷರಗಳು ಮತ್ತು ಅಂಕಗಳು ಹೊಂದಿಕೊಳ್ಳದಿರುವುದು ಅಥವಾ ಅಸ್ಪಷ್ಟ ಬರವಣಿಗೆಯೇ ಚೆಕ್ ರದ್ದಾಗುವುದಕ್ಕೆ ಮುಖ್ಯ ಕಾರಣಗಳಾಗಿವೆ.

# ಸೈಬರ್ ಕೃತ್ಯಗಳಿಂದಾಗಿ ಪ್ರತಿ ದಿನವೂ ಸರಾಸರಿ ರೂ.5.45 ಕೋಟಿ ವಂಚನೆ

**ಕೇಂದ್ರ ಸರ್ಕಾರ ಹೆಮ್ಮೆಯಿಂದ ಪ್ರತಿಪಾದಿಸುವ 'ಡಿಜಿಟಲ್ ಇಂಡಿಯಾ' ಪರಿಕಲ್ಪನೆಗೆ ವಿರೋಧಾಭಾಸದ ರೂಪದಲ್ಲಿ ಡಿಜಿಟಲ್ ಇಂಡಿಯಾ' ಸಿಲಿಕಾನ್ ವ್ಯಾಲಿ ಎಂದು ಪ್ರಸಿದ್ಧವಾದ ಬೆಂಗಳೂರು ಮಹಾನಗರದಲ್ಲಿ ಸೈಬರ್ ಅಪರಾಧ ಕೃತ್ಯಗಳಿಂದಾಗಿ ಪ್ರತಿ ದಿನವೂ ಸರಾಸರಿ ರೂ.5.45 ಕೋಟಿ ರೂಪಾಯಿ ವಂಚನೆ ನಡೆಯುತ್ತಿದೆ ಎನ್ನುವ ಮಾಹಿತಿ ಆತಂಕ ಹುಟ್ಟಿಸುವಂತಹದ್ದು. ಸೈಬರ್ ಅಪರಾಧಗಳ ಬಗ್ಗೆ ಮಾಧ್ಯಮಗಳಲ್ಲಿ ಪ್ರತಿನಿತ್ಯ ವರದಿಗಳು ಪ್ರಕಟಗೊಳ್ಳುತ್ತಿವೆ.**



ಡಿಜಿಟಲ್ ಅಪರಾಧಗಳ ಬಗ್ಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಹಮ್ಮಿಕೊಂಡಿರುವ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಅಣಕಿಸುವಂತೆ, ಡಿಜಿಟಲ್ ವಂಚನೆಗಳ ಪ್ರಮಾಣ ಏರುಗತಿಯಲ್ಲಿದೆ. ಈ ವರ್ಷದ ನವೆಂಬರ್ 15ರ ವೇಳೆಗೆ ಸೈಬರ್ ಅಪರಾಧಗಳಿಗೆ ಬಲಿಪಶು ಆಗಿರುವವರು ರೂ.1,543 ಕೋಟಿ ಕಳೆದುಕೊಂಡಿದ್ದಾರೆ ಎಂದು ಗೃಹ ಸಚಿವರು ತಿಳಿಸಿದ್ದಾರೆ.

2024ರಲ್ಲಿ ವಂಚನೆಯ ಪ್ರಮಾಣ ರೂ.1,995 ಕೋಟಿ ಇದ್ದುದನ್ನು ಗಮನಿಸಿದರೆ, ಎರಡು ವರ್ಷಗಳ ಅವಧಿಯಲ್ಲಿ ಬೆಂಗಳೂರು ಸೈಬರ್ ಅಪರಾಧಗಳ ನಗರವಾಗಿ ಹಾದಿಯಲ್ಲಿ ದಾಪುಗಾಲು ಇಡುತ್ತಿರುವಂತಿದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆ (ರೂ.49.85 ಕೋಟಿ), ಮಂಗಳೂರು (ರೂ.33.78 ಕೋಟಿ), ಮೈಸೂರು (ರೂ.33.17 ಕೋಟಿ) ಹಾಗೂ ಚಿಕ್ಕಬಳ್ಳಾಪುರ (ರೂ.28.13 ಕೋಟಿ) ಜಿಲ್ಲೆಗಳಲ್ಲೂ ಪ್ರಸಕ್ತ ವರ್ಷ ದೊಡ್ಡ ಪ್ರಮಾಣದಲ್ಲಿ ಸೈಬರ್ ವಂಚನೆ ನಡೆದಿದೆ. ಗ್ರಾಮೀಣ ಪ್ರದೇಶಗಳಲ್ಲಿಯೂ ಸೈಬರ್ ವಂಚನೆಯ ಪ್ರಕರಣಗಳು ನಡೆಯುತ್ತಿದ್ದರೂ, ಬೆಂಗಳೂರಿನಲ್ಲಿ ನಡೆಯುತ್ತಿರುವ ಪ್ರಕರಣಗಳಲ್ಲಿ ಗಾಬರಿ ಹುಟ್ಟಿಸುವಷ್ಟು ದೊಡ್ಡ ಮೊತ್ತದ ಹಣವನ್ನು ವಂಚಕರು ದೋಚುತ್ತಿದ್ದಾರೆ.

ಸೈಬರ್ ಅಪರಾಧಗಳ ಸ್ವರೂಪವೂ ನಿರಂತರವಾಗಿ ಬದಲಾಗುತ್ತಿದೆ. ಫಿಶಿಂಗ್, ಕಾರ್ಡ್ ಸ್ಕಿಮ್ಮಿಂಗ್, ಒಟಿಪಿ ದುರುಪಯೋಗ ರೂಪದ ಹೆಚ್ಚು ಪ್ರಚಲಿತ ಅಪರಾಧಗಳ ಜೊತೆಗೆ ಡಿಜಿಟಲ್ ಅರೆಸ್ಟ್ ಹಾಗೂ ಹೂಡಿಕೆಯ ಹೆಸರಿನ ವಂಚನೆಗಳು ಹೆಚ್ಚಾಗುತ್ತಿವೆ. ಪ್ರಾಧ್ಯಾಪಕರು, ವಿಜ್ಞಾನಿಗಳು, ವೈದ್ಯರು, ಸಾಫ್ಟ್‌ವೇರ್ ಎಂಜಿನಿಯರ್‌ಗಳು ಸೇರಿದಂತೆ ದೊಡ್ಡ ದೊಡ್ಡ ಹುದ್ದೆಗಳಲ್ಲಿ ಇರುವವರೂ ಡಿಜಿಟಲ್ ಅರೆಸ್ಟ್ ಜಾಲಕ್ಕೆ ಸಿಲುಕುತ್ತಿದ್ದಾರೆ. ಷೇರು ಮಾರುಕಟ್ಟೆಯಲ್ಲಿ ಹೆಚ್ಚಿನ ಲಾಭ ಗಳಿಸಿಕೊಡುವ ಆಮಿಷಕ್ಕೆ ಒಳಗಾಗಿ ಬೆಂಗಳೂರಿನ ಉದ್ಯಮಿಯೊಬ್ಬರು ಇತ್ತೀಚೆಗಷ್ಟೇ ರೂ.8.3 ಕೋಟಿ ಕಳೆದುಕೊಂಡಿದ್ದಾರೆ.

ಸಾಮಾಜಿಕ ಜಾಲತಾಣಗಳು, ಡೇಟಿಂಗ್ ಆ್ಯಪ್‌ಗಳ ಮೂಲಕ ಪರಿಚಯ ಮಾಡಿಕೊಂಡು, ಭಾವನಾತ್ಮಕ ನಂಟನ್ನೂ ಬೆಳೆಸಿಕೊಂಡು, ಭಾವಿ ಜೀವನ ಸಂಗಾತಿಯಂತೆ ವರ್ತಿಸುವ ಮೂಲಕ ವಂಚಿಸುವ ಪ್ರಕರಣಗಳೂ ನಡೆದಿವೆ. ಮಹಿಳೆಯರನ್ನು ಗುರಿಯಾಗಿಸಿಕೊಂಡು ನಡೆಯುವ ವಂಚನೆಗಳ ಪ್ರಮಾಣವೂ ಹೆಚ್ಚಾಗಿದೆ. ಡಿಜಿಟಲ್ ಅರೆಸ್ಟ್ ಸಂದರ್ಭದಲ್ಲಿ ಬಲಿಪಶುಗಳನ್ನು ಮಾನಸಿಕ ಒತ್ತಡಕ್ಕೆ ಒಳಪಡಿಸಿ ಹಣ ಲಪಟಾಯಿಸಲಾಗುತ್ತಿದೆ.

ಡಿಜಿಟಲ್ ವಂಚನೆಗಳು ಹೆಚ್ಚುತ್ತಿದ್ದರೂ, ಅವುಗಳನ್ನು ಪತ್ತೆಹಚ್ಚುವ ಹಾಗೂ ಅಪರಾಧಿಗಳನ್ನು ಕಾನೂನು ಕ್ರಮಕ್ಕೆ ಒಳಪಡಿಸುವ ವ್ಯವಸ್ಥೆ ಸಮರ್ಥವಾಗಿ ಬೆಳೆಯದಿರುವುದು ದುರದೃಷ್ಟಕರ. ಸೈಬರ್ ಅಪರಾಧಗಳ ತನಿಖೆಗೆಂದು ಪ್ರತ್ಯೇಕ ವಿಭಾಗವೇ ಇದ್ದರೂ, ಫಲಿತಾಂಶ ಆಶಾದಾಯಕವಾಗಿಯೇನೂ ಇಲ್ಲ. 2025ರಲ್ಲಿ ಅಪರಾಧ ಪತ್ತೆ ಪ್ರಮಾಣ ಸುಧಾರಿಸಿದ್ದರೂ, ವಂಚಕರ ಪಾಲಾದ ಹಣವನ್ನು ಸಂತ್ರಸ್ತರಿಗೆ ಮರಳಿಸುವ ನಿಟ್ಟಿನಲ್ಲಿ ಹೆಚ್ಚಿನ ಫಲಶ್ರುತಿ ಕಂಡುಬರುತ್ತಿಲ್ಲ. ದೊಡ್ಡ ಮೊತ್ತದ ವಂಚನೆಗಳು ಸುದ್ದಿಯಾಗುತ್ತವೆ ಹಾಗೂ ಆ ಪ್ರಕರಣಗಳ ತನಿಖೆಯೂ ನಡೆಯುತ್ತದೆ. ಆದರೆ, ಸಣ್ಣ ಪುಟ್ಟ ಪ್ರಮಾಣದ ಪ್ರಕರಣಗಳು ದಾಖಲಾಗದೆಯೇ ಉಳಿಯುತ್ತಿವೆ.

ಸೀಮಿತ ಸಂಪನ್ಮೂಲಗಳೊಂದಿಗೆ ಕರ್ತವ್ಯ ನಿರ್ವಹಿಸುತ್ತಿರುವ ಸೈಬರ್ ಪೊಲೀಸರು, ಕೆಲಸದ ಒತ್ತಡದಿಂದಾಗಿ ಹೈರಾಣಾಗುತ್ತಿದ್ದಾರೆ ಹಾಗೂ ಜನಸಾಮಾನ್ಯರ ಪ್ರಕರಣಗಳನ್ನು ಗಮನಿಸುವ ಸಮಯ ಮತ್ತು ಸಾವಧಾನ ಕಳೆದುಕೊಂಡಿದ್ದಾರೆ. ಡಿಜಿಟಲ್ ವಹಿವಾಟಿನಲ್ಲಿ ಹಿಂದಿರುಗಿ ಬಾರದಷ್ಟು ದೂರಕ್ಕೆ ಸಾಗಿರುವುದರಿಂದ, ಸೈಬರ್ ವಂಚನೆಗಳ ವಿರುದ್ಧ ಸುರಕ್ಷತೆ ರೂಪಿಸಿಕೊಳ್ಳುವುದಷ್ಟೇ ನಮಗೆ ಉಳಿದಿರುವ ದಾರಿಯಾಗಿದೆ. ಸೈಬರ್ ಪೊಲೀಸ್ ಠಾಣೆ ಹಾಗೂ ಸಿಬ್ಬಂದಿಯನ್ನು ಇನ್ನಷ್ಟು ಹೆಚ್ಚಿಸುವ ನಿಟ್ಟಿನಲ್ಲಿ ಸರ್ಕಾರ ಕಾರ್ಯತತ್ಪರ ಆಗಬೇಕಾಗಿದೆ. ಡಿಜಿಟಲ್ ಸುರಕ್ಷತೆಯ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಶಾಲಾಕಾಲೇಜುಗಳಲ್ಲಿ ನಡೆಸಬೇಕಾಗಿದೆ. ಸರ್ಕಾರ ಹಾಗೂ ಸಮಾಜದ ಪರಿಣಾಮಕಾರಿ ಸಹಯೋಗದಿಂದ ಮಾತ್ರ ಸೈಬರ್ ವಂಚನೆಗಳಿಗೆ ಕಡಿವಾಣ ಹಾಕುವುದು ಸಾಧ್ಯ.



## ನಿಮ್ಮ ಪ್ರಶ್ನೆ ನಮ್ಮ ಉತ್ತರ



▸▸ **ಸುಧಾಕರ್ ಭಟ್,** ಬ್ಯಾಂಕಿಂಗ್ ಸಲಹೆಗಾರರು.

**01. ಪಟ್ಟಣ ಸಹಕಾರ ಬ್ಯಾಂಕುಗಳು ತಮ್ಮ ನಿರ್ದೇಶಕರ ಮತ್ತು ಬಿ.ಒ.ಎಂ. ಸದಸ್ಯರ ಪರಸ್ಪರ ಸಂಬಂಧಿತ ವ್ಯಕ್ತಿಗಳಿಗೆ (Reciprocally Related Person) ಸಾಲ ನೀಡುವುದನ್ನು ರಿಜರ್ವ್ ಬ್ಯಾಂಕು ನಿರ್ಬಂಧಿಸಿದೆ. ನಮ್ಮ ಬ್ಯಾಂಕು ಹೊರತುಪಡಿಸಿ, ಬೇರೆ ಯಾವುದೇ ಸಹಕಾರ ಬ್ಯಾಂಕಿನಲ್ಲಿ ನಿರ್ದೇಶಕರಾಗಿರುವ ವ್ಯಕ್ತಿಗಳು, ಬೇರೆ ಸಹಕಾರ ಬ್ಯಾಂಕಿನ ಬಿ.ಒ.ಎಂ. ಸದಸ್ಯರು, ಅವರ ಸಂಬಂಧಿಕರು ಮತ್ತು ಅವರಿಗೆ ಸಂಬಂಧಿಸಿದ ಸಂಸ್ಥೆಗಳನ್ನು ಪರಸ್ಪರ ಸಂಬಂಧಿತ ವ್ಯಕ್ತಿಗಳು ಎಂದು ಪರಿಗಣಿಸಲಾಗುತ್ತದೆ. ಸಾಲಕ್ಕೆ ಅರ್ಜಿ ಹಾಕಿದ ವ್ಯಕ್ತಿ "ಪರಸ್ಪರ ಸಂಬಂಧಿತ ವ್ಯಕ್ತಿಯೇ" ಎಂದು ತೀರ್ಮಾನಿಸುವುದು ಹೇಗೆ? ಈ ಬಗ್ಗೆ ಮಾರ್ಗದರ್ಶನ ಮಾಡಿ.**

**– ಶಿವ ಸಹಕಾರಿ ಬ್ಯಾಂಕ್ ಲಿ., ಶಿಕಾರಿಪುರ.**

**ಉತ್ತರ :** ಬ್ಯಾಂಕುಗಳು "ಪರಸ್ಪರ ಸಂಬಂಧಿತ ವ್ಯಕ್ತಿ" (RRP) ಯನ್ನುಗುರುತಿಸಲು ಈ ಕೆಳಗಿನ ಕ್ರಮಗಳನ್ನು ಅನುಸರಿಸಬಹುದು.

- **ಸ್ವಯಂ ಘೋಷಣೆ (Self-Declaration) :** ಸಾಲ ಪಡೆಯಲು ಬರುವ ಪ್ರತಿಯೊಬ್ಬ ಅರ್ಜಿದಾರರು, ತಾವು ಅಥವಾ ತಮ್ಮ ಸಂಬಂಧಿಕರು ಬೇರೆ ಯಾವುದೇ ಸಹಕಾರ ಬ್ಯಾಂಕಿನಲ್ಲಿ ನಿರ್ದೇಶಕರಾಗಿದ್ದಾರೆಯೇ ಎಂಬ ಬಗ್ಗೆ ಕಡ್ಡಾಯವಾಗಿ ಲಿಖಿತ ಘೋಷಣೆ ನೀಡಬೇಕು.
- **ವ್ಯವಹಾರದ ಹಿತಾಸಕ್ತಿ (Significant Interest) :** ಒಂದು ವೇಳೆ ಸಾಲ ಕೇಳುತ್ತಿರುವವರು ಒಬ್ಬ ವ್ಯಕ್ತಿಯಾಗಿರದೆ ಕಂಪನಿ ಅಥವಾ ಸಂಸ್ಥೆಯಾಗಿದ್ದರೆ, ಆ ಸಂಸ್ಥೆಯಲ್ಲಿ RRP ಗಳು ಪಾಲುದಾರರಾಗಿದ್ದಾರೆಯೇ ಅಥವಾ 10% ಕ್ಕಿಂತ ಹೆಚ್ಚು ಷೇರುಗಳನ್ನು ಹೊಂದಿದ್ದಾರೆಯೇ ಎಂದು ಪರಿಶೀಲಿಸಬೇಕು.

**02. ನಮ್ಮ ಬ್ಯಾಂಕಿನಲ್ಲಿ ಹೊಸ ಆಡಳಿತ ಮಂಡಳಿ ಅಧಿಕಾರ ಸ್ವೀಕರಿಸಿದೆ. ಅವರಿಗೆ ಈಗಿರುವ ಮುಖ್ಯಕಾರ್ಯನಿರ್ವಹಣಾಧಿಕಾರಿಗಳ (ಸಿ.ಇ.ಒ) ಕಾರ್ಯಶೈಲಿ ಬಗ್ಗೆ ಅಸಮಾಧಾನವಿದೆ. ಸಿ.ಇ.ಒ ಅವರನ್ನು ಹುದ್ದೆಯಿಂದ ಮುಕ್ತಗೊಳಿಸಿ ಹೊಸಬರನ್ನು ನೇಮಿಸಲು ಕೈಗೊಳ್ಳಬೇಕಾದ ಕ್ರಮಗಳೇನು?**

**– ಪಟ್ಟಣ ಸಹಕಾರ ಬ್ಯಾಂಕ್ ಲಿ., ಬೆಂಗಳೂರು.**

**ಉತ್ತರ:** ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆಯ ಸೆಕ್ಷನ್35B(1)(b) ಸ್ಪಷ್ಟವಾಗಿ ಹೇಳುತ್ತದೆ: "ಯಾವುದೇ ಮುಖ್ಯಕಾರ್ಯನಿರ್ವಾಹಕ ಅಧಿಕಾರಿ (CEO) ಅಥವಾ ವ್ಯವಸ್ಥಾಪಕ ನಿರ್ದೇಶಕರ (MD) ನೇಮಕಾತಿ, ಮರು ನೇಮಕಾತಿ ಅಥವಾ ಅವರ ಸೇವೆಯನ್ನು ಕೊನೆಗೊಳಿಸುವುದು (Termination), ಆರ್‌ಬಿಐನ ಪೂರ್ವಾನುಮತಿ ಇಲ್ಲದೆ ಜಾರಿಗೆ ಬರುವುದಿಲ್ಲ."

ನವೆಂಬರ್ 28, 2025ರ ಆರ್‌ಬಿಐ ಆಡಳಿತ ನಿರ್ದೇಶನಗಳು – ಪ್ಯಾರಾ 29 ಈ ನಿಯಮವನ್ನು ಮತ್ತಷ್ಟು ಬಲಪಡಿಸಿವೆ. ಆದ್ದರಿಂದ, ಬ್ಯಾಂಕು ಸಿಇಒ ಅವರನ್ನು ವಜಾಗೊಳಿಸಲು ನಿರ್ಧರಿಸಿದರೂ, ಆ ನಿರ್ಧಾರಕ್ಕೆ ಆರ್‌ಬಿಐ ಅಧಿಕೃತವಾಗಿ ಒಪ್ಪಿಗೆ ನೀಡುವವರೆಗೆ ಆ ವಜಾ ಆದೇಶಕ್ಕೆ ಕಾನೂನು ಬದ್ಧ ಮಾನ್ಯತೆ ಇರುವುದಿಲ್ಲ. ಒಂದು ವೇಳೆ ಬ್ಯಾಂಕ್ ಸಿಇಒ ಅವರನ್ನು ತೆಗೆದುಹಾಕಲು ಗಂಭೀರ ಕಾರಣಗಳಿದ್ದರೆ (ಉದಾಹರಣೆಗೆ ಭ್ರಷ್ಟಾಚಾರ ಅಥವಾ ಕರ್ತವ್ಯ ಲೋಪ), ಬ್ಯಾಂಕ್ ಈ ಕೆಳಗಿನ ಕ್ರಮ ಕೈಗೊಳ್ಳಬೇಕು:

1. ಆಡಳಿತ ಮಂಡಳಿಯಲ್ಲಿ ವಜಾ ಮಾಡುವ ಬಗ್ಗೆ ನಿರ್ಣಯ ಕೈಗೊಳ್ಳಬೇಕು.
2. ಅದಕ್ಕೆ ಪೂರಕವಾದ ದಾಖಲೆಗಳೊಂದಿಗೆ ಆರ್‌ಬಿಐಗೆ ಅರ್ಜಿಯನ್ನು ಸಲ್ಲಿಸಬೇಕು.
3. ಆರ್‌ಬಿಐ ಎಲ್ಲಾ ಆಯಾಮಗಳನ್ನು ಪರಿಶೀಲಿಸಿ ಅನುಮತಿ ನೀಡಿದ ನಂತರವಷ್ಟೇ ಸಿಇಒ ಅವರನ್ನು ಹುದ್ದೆಯಿಂದ ಮುಕ್ತಗೊಳಿಸಬಹುದು. ಹೊಸ ಸಿ.ಇ.ಒ ನೇಮಕಾತಿಗೂ ರಿಜರ್ವ್ ಬ್ಯಾಂಕಿನ ಪೂರ್ವಾನುಮತಿ ಬೇಕು.

## ಶ್ರೀ ಸುಬ್ರಮಣ್ಯೇಶ್ವರ ಕೋ-ಆಪರೇಟಿವ್ ಬ್ಯಾಂಕ್ : ಬೃಹತ್ ಆರೋಗ್ಯ ತಪಾಸಣಾ ಶಿಬಿರ





**ಬೆಂಗಳೂರು:** ದಿನಾಂಕ : 11.01.2026ನೇ ಭಾನುವಾರದಂದು ಶ್ರೀ ಸುಬ್ರಮಣ್ಯೇಶ್ವರ ಕೋ–ಆಪರೇಟಿವ್ ಬ್ಯಾಂಕಿನ ವತಿಯಿಂದ ಬೃಹತ್ ಆರೋಗ್ಯ ತಪಾಸಣಾ ಶಿಬಿರವನ್ನು ಏರ್ಪಡಿಸಲಾಗಿದ್ದು, ಮುಖ್ಯ ಅತಿಥಿಗಳಾಗಿ ಮಾನ್ಯ ಡಾ. ಉದಯ್ ಬಿ. ಗರುಡಾಚಾರ್, ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ಶಾಸಕರು, ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಡಿ.ಆರ್. ವಿಜಯಸಾರಥಿಯವರು, ಪ್ರಧಾನ ವ್ಯವಸ್ಥಾಪಕರಾದ ಶ್ರೀ ಕೆ.ಎನ್.ಕೃಷ್ಣಯ್ಯ ಶೆಟ್ಟಿಯವರು, ಬ್ಯಾಂಕಿನ ಪೂರ್ಣ ಪ್ರಮಾಣದ ಸಲಹೆಗಾರರಾದ ಶ್ರೀ ಬಿ.ಆರ್. ನಾಗರಾಜರವರು, ಆಡಳಿತ ಮಂಡಳಿ ಸದಸ್ಯರು, ಬ್ಯಾಂಕಿನ ಸಿಬ್ಬಂದಿಗಳು ಹಾಗೂ ಬ್ಯಾಂಕಿನ ಸದಸ್ಯರು ಭಾಗವಹಿಸಿದ್ದರು.

## ಒನ್‌ಲೈನ್ ನ್ಯೂಸ್

**ಈ ಪುಟದಲ್ಲಿನ ಸುದ್ದಿಗಳನ್ನು ಓದಿದ್ದೀರಾ...?**
**ಕುತೂಹಲಕಾರಿಯಾದ ಸುದ್ದಿಗಳು** ನಿಮ್ಮ ಕಣ್ಣು ತಪ್ಪಿದ್ದರೆ, ಇಲ್ಲಿವೆ ಓದಿ.

- ಉಡುಪಿ ಜಿಲ್ಲೆ ಕುಂದಾಪುರ ಕರಾವಳಿಯ ಕಡಲತೀರಗಳ ಕೆಲವು ಭಾಗಗಳಲ್ಲಿ ಅಳಿವಿನಂಚಿನಲ್ಲಿರುವ ಆಲಿವ್ ರಿಡ್ಲಿ ಆಮೆಗಳು (Oive Ridleys) ಮೊಟ್ಟೆಯಿಡುವ ಸಮಯವಾಗಿದೆ. ನಾಯಿಗಳಿಂದ ಮತ್ತು ಇತರ ಪರಭಕ್ಷಕಗಳಿಂದ ಈ ಆಮೆ ಮೊಟ್ಟೆಗಳನ್ನು ರಕ್ಷಿಸಲು ಕಡಲತೀರಗಳಲ್ಲಿ ವಿಶೇಷ ಆವರಣಗಳನ್ನು ಅರಣ್ಯ ಅಧಿಕಾರಿಗಳು ಸಿದ್ಧಪಡಿಸಿದ್ದಾರೆ. ಆಮೆ ಮರಿಗಳು ಮೊಟ್ಟೆಯಿಂದ ಹೊರಬಂದು ಸಮುದ್ರಕ್ಕೆ ಹೋಗುವವರೆಗೆ ನಾವು ರಕ್ಷಣೆ ನೀಡುತ್ತೇವೆ ಎಂದು ಅರಣ್ಯ ಅಧಿಕಾರಿಗಳು ತಿಳಿಸಿದ್ದಾರೆ.
- ರೋಣ ತಾಲೂಕಿನಲ್ಲಿ ರೈತರು ಬೆಳೆದ ಮೆಣಸಿನಕಾಯಿಯ ಕಳ್ಳತನವಾಗುತ್ತಿದೆ. ಕಳ್ಳರು ಕದ್ದ ಮೆಣಸಿನಕಾಯಿಯನ್ನು ಗದಗ, ಹುಬ್ಬಳ್ಳಿ ಮಾರುಕಟ್ಟೆಗಳಲ್ಲಿ ಮಾರಾಟ ಮಾಡುತ್ತಿದ್ದಾರೆ. ಇದನ್ನು ತಡೆಯಲು ಒಂದು ಕೈಯಲ್ಲಿ ಬ್ಯಾಟರಿ ಮತ್ತೊಂದು ಕೈಯಲ್ಲಿ ಕೋಲು ಹಿಡಿದು ರೈತರು ರಾತ್ರಿ ಪೂರ್ತಿ ಜಮೀನು ಸುತ್ತ ಪಹರೆಯಲ್ಲಿ ತೊಡಗಿದ್ದಾರೆ.
- ಸಸ್ಯಗಳು ಸ್ಟೊಮಾಟಾ ಎಂಬ ಸಣ್ಣ ಎಲೆ ರಂಧ್ರಗಳ ಮೂಲಕ ಉಸಿರಾಡುತ್ತವೆ ಎನ್ನುವುದು ತಿಳಿದಿದೆ. ಆದರೆ, ಈಗ ಸಸ್ಯಗಳು ಇಂಗಾಲವನ್ನು ಹೀರಿಕೊಳ್ಳುವಾಗ ಮತ್ತು ಆಮ್ಲಜನಕ ಮತ್ತು ನೀರಿನ ಆವಿಯನ್ನು ಬಿಡುಗಡೆ ಮಾಡುವಾಗಿನ ಅನಿಲಗಳ ಕ್ರಿಯಾತ್ಮಕ ಚಲನೆಯನ್ನು ಅತಿ ಸೂಕ್ಷ್ಮ ಕ್ಯಾಮರಾ ಮೂಲಕ ಸೆರೆ ಹಿಡಿಯುವ ಮೂಲಕ ಇಲಿನಾಯ್ಸ್ ವಿಶ್ವವಿದ್ಯಾಲಯದ ಸಸ್ಯ ಜೀವಶಾಸ್ತ್ರ ವಿಭಾಗ ಮತ್ತು ಜೀನೋಮಿಕ್ ಜೀವಶಾಸ್ತ್ರ ಸಂಸ್ಥೆಯ ಆಂಡ್ರ್ಯೂ ಲೀಕಿ ವಿಜ್ಞಾನಿಗಳ ತಂಡ ದಾಖಲು ಮಾಡಿದೆ.
- ಬೆಂಗಳೂರಿನ ಹಲವು ಐತಿಹಾಸಿಕ ಮತ್ತು ಸಾಂಸ್ಕೃತಿಕ ತಾಣಗಳನ್ನು ಪ್ರವಾಸಿ ತಾಣವಾಗಿ ಜನಪ್ರಿಯಗೊಳಿಸಲು ಲಂಡನ್ ಮಾದರಿಯ 'ಅಂಬಾರಿ ಡಬಲ್ ಡೆಕ್ಕರ್' ಪ್ರವಾಸಿ ಬಸ್ ಮೂಲಕ ಉದ್ದೇಶಿಸಲಾಗಿದೆ ಎಂದು ಪ್ರವಾಸೋದ್ಯಮ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್‌ಕೆ ಪಾಟೀಲ್ ಅವರು ಹೇಳಿದ್ದಾರೆ.
- ಬಾಹ್ಯಾಕಾಶದಲ್ಲಿ 7 ಬಾರಿ ದೀರ್ಘಕಾಲದವರೆಗೆ ನಡೆದಾಡಿರುವ ಮಹಿಳಾ ಗಗನಯಾತ್ರಿ ಸುನಿತಾ ವಿಲಿಯಮ್ಸ್ ಅವರು ವಿಶ್ವ ದಾಖಲೆ ಮಾಡಿದ್ದರೂ, ನಾಸಾದಿಂದ ನಿವೃತ್ತರಾದ ನಂತರ, ಪ್ರತಿ ಗಗನಯಾತ್ರಿಗೂ ಚಂದಿರನ ಮೇಲೆ ನಡೆಯಬೇಕೆಂಬ ಆಸೆ ಇರುತ್ತದೆ, ನನಗೂ ಆ ಆಸೆಯಿದೆ ಎಂದು ಮನಬಿಚ್ಚಿ ಮಾತನಾಡಿದ್ದಾರೆ.

## ಓದುಗರ ಅನಿಸಿಕೆ...




**ಮನನೀಯವಾಗಿದೆ :** ನಮ್ಮ ಸಂವಿಧಾನದ ಮೌಲ್ಯಗಳು ಸಮಾಜ ಮತ್ತು ವ್ಯಕ್ತಿಗತ ಜೀವನದಲ್ಲಿ ಎಷ್ಟು ಅನುಷ್ಠಾನವಾಗಿದೆ ಹಾಗೂ ಸಂವಿಧಾನದ ಹಕ್ಕುಗಳು ಮತ್ತು ಕರ್ತವ್ಯಗಳ ಕುರಿತು ಗಂಭೀರ ಚರ್ಚೆ ನಡೆಯಬೇಕಿದೆ. ಆಗ ಮಾತ್ರ ಗಣರಾಜ್ಯೋತ್ಸವ ಆಚರಣೆ ಸಾರ್ಥಕ. ಗಣರಾಜ್ಯೋತ್ಸವ ಆಚರಣೆ ಸರ್ಕಾರಗಳ ಸಂಭ್ರಮವಾಗದೆ, ಜನ ಸಂಭ್ರಮವಾಗಬೇಕೆನ್ನುವ ಕಳೆದ ಸಂಚಿಕೆಯಲ್ಲಿನ ಸಂಪಾದಕೀಯದ ಮಾತುಗಳು ಮನನೀಯವಾಗಿದೆ.
**▸▸ ಅರುಣಾ ಹಿರೇಮಠ್, ಧಾರವಾಡ**

**ಇದಕ್ಕೆ ಯಾರು ಹೊಣೆ? :** ದೇಶದ ಸಾರ್ವಜನಿಕ ವಲಯದ ಬ್ಯಾಂಕುಗಳು ಕಳೆದ ಐದೂವರೆ ವರ್ಷಗಳಲ್ಲಿ ರೂ.6.15 ಲಕ್ಷ ಕೋಟಿ ಸಾಲಗಳನ್ನು ರೈಟ್‌ಆಫ್ ಮಾಡಿವೆ ಎಂದು ಕೇಂದ್ರ ಸರ್ಕಾರವೇ ಬಹಿರಂಗ ಪಡಿಸಿದೆ. ಈ ಹಿಂದಿನ ಐದು ವರ್ಷಗಳಲ್ಲಿ ರೈಟ್‌ಆಫ್ ಮಾಡಿದ ಸಾಲಗಳಿಂದ ಕೇವಲ ರೂ.1.65 ಲಕ್ಷ ಕೋಟಿ ಮಾತ್ರ ವಸೂಲಿ ಸಾಧ್ಯವಾಗಿದೆ ಎಂದರೆ ಆತಂಕಕಾರಿಯಾದ ವಿಷಯವಲ್ಲವೇ? ಇದಕ್ಕೆ ಯಾರು ಹೊಣೆ?
**▸▸ ಮಲ್ಲಿಕಾರ್ಜುನ ಸ್ವಾಮಿ, ದಾವಣಗೆರೆ**

ಸಂಪಾದಕರು :
**ಪುಂಡಲೀಕ ಎನ್. ಕೇರೂರೆ,**
ಮುಖ್ಯಕಾರ್ಯನಿರ್ವಹಣಾಧಿಕಾರಿ,
ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ
ಮಹಾಮಂಡಳ ನಿ., ಬೆಂಗಳೂರು.

**ಇವರಿಗೆ,**

Edited, Published and printed by Pundalik N. Kerure, C.E.O. on behalf of the
Karnataka State Co-operative Urban Banks Federation Ltd., Bangalore - 560027.
Published at : # 132, K.H. Road, Bangalore - 560027.
Printed at : Navarathna Printers, #35, 3rd Cross, Sudhamanagar, Bangalore - 560027.